# V. ಎಣ್ಣೆಕಾಳು ಬೆಳೆಗಳು

ಎಣ್ಣೆಕಾಳು ಬೆಳೆಗಳು ಭಾರತದ ಕೃಷಿ ಕ್ಷೇತ್ರದ ವಹಿವಾಟಿನಲ್ಲಿ ಎರಡನೇಯ ಸ್ಥಾನವನ್ನು ಪಡೆದುಕೊಂಡಿವೆ. ನಮ್ಮ ದೇಶವು ವಿಶ್ವದಲ್ಲೇ ಅತಿ ಹೆಚ್ಚು ಹರಳು ಮತ್ತು ಕುಸುಬೆ ಉತ್ಪಾದಿಸುವ ದೇಶವಾಗಿದೆ. ನೆಲಗಡಲೆ ಮತ್ತು ಎಳ್ಳು ಉತ್ಪಾದನೆಯಲ್ಲಿ ಎರಡನೇಯ ಸ್ಥಾನ ಪಡೆದಿವೆ. ಅಗಸೆ ಮತ್ತು ಸಾಸಿವೆ ಉತ್ಪಾದನೆಯಲ್ಲಿ ಮೂರನೆಯ ಸ್ಥಾನ ಪಡೆದುಕೊಂಡಿದೆ. ಭಾರತದ ಎಣ್ಣೆಕಾಳು ಉತ್ಪಾದನೆ ನಕ್ಷೆಯಲ್ಲಿ ಕರ್ನಾಟಕ ಪ್ರಮುಖ ಸ್ಥಾನವನ್ನು ಅಲಂಕರಿಸಿದೆ. ಕಳೆದ ದಶಕದಲ್ಲಿ ಎಣ್ಣೆಕಾಳು ಉತ್ಪಾದನಾ ತಾಂತ್ರಿಕತೆಯಲ್ಲಿ ನಮ್ಮ ರಾಜ್ಯ ಗಣನೀಯ ಪ್ರಗತಿಯನ್ನು ಸಾಧಿಸಿದೆ. ನಮ್ಮ ರಾಜ್ಯದ ಸೂರ್ಯಕಾಂತಿ ಬೆಳೆ ಕ್ಷೇತ್ರವು ರಾಷ್ಟ್ರದ ವಿಸ್ತೀರ್ಣದ ಅರ್ಧಕ್ಕಿಂತ ಹೆಚ್ಚು ಭಾಗವಿರುವುದರಿಂದ ನಮ್ಮ ರಾಜ್ಯ ಸೂರ್ಯಕಾಂತಿ ರಾಜ್ಯ ಎಂಬ ಬಿರುದನ್ನು ಪಡೆದುಕೊಂಡಿದೆ. ರಾಜ್ಯದಲ್ಲಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಕಾಲಗಳಲ್ಲಿ ಎಣ್ಣೆಕಾಳುಗಳನ್ನು ಬೆಳೆಯಲಾಗುತ್ತಿದೆ.

**ಕೋಷ್ಟಕ:** ಎಣ್ಣೆ ಕಾಳು ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಹಾಗೂ ಉತ್ಪಾದಕತೆ.

| *ಕ್ರ.ಸಂ* | *ಬೆಳೆಗಳು* | *ಒಟ್ಟು ವಿಸ್ತೀರ್ಣ (ಲಕ್ಷ ಎಕರೆ)* | *ಒಟ್ಟು ಉತ್ಪಾದನೆ (ಲಕ್ಷಟನ್)* | *ಉತ್ಪಾದಕತೆ (ಕಿ.ಗ್ರಾಂ /ಎ)* |
|---|---|---|---|---|
| 1 | ನೆಲಗಡಲೆ | 5.64 | 6.37 | 474 |
| 2 | ಸೂರ್ಯಕಾಂತಿ | 1.73 | 1.51 | 367 |
| 3 | ಸೋಯಾ ಅವರೆ | 2.77 | 4.23 | 644 |
| 4 | ಹರಳು | 0.23 | 0.04 | 333 |
| 5 | ಎಳ್ಳು | 0.36 | 0.31 | 370 |
| 6 | ಕುಸುಬೆ–ಮಳೆಯಾಶ್ರಿತ | 0.34 | 0.30 | 379 |
| 7 | ಹುಚ್ಚೆಳ್ಳು | 0.04 | 0.01 | 87 |
| **ಒಟ್ಟು** | | **10.96** | **12.78** | **370 (ಸರಾಸರಿ)** |

ನಮ್ಮ ದೇಶ ಹಾಗೂ ರಾಜ್ಯದಲ್ಲಿ ಎಣ್ಣೆಕಾಳು ಬೆಳೆಗಳ ಉತ್ಪಾದಕತೆ ಇತರೆ ದೇಶಗಳಿಗೆ ಹೋಲಿಸಿದರೆ ಬಹಳ ಕಡಿಮೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ,

- ಎಣ್ಣೆ ಕಾಳು ಬೆಳೆಗಳನ್ನು ಬೆಳೆಯುವ ಹೆಚ್ಚಿನ ಪ್ರದೇಶ ಮಳೆಯಾಶ್ರಿತವಾಗಿರುವುದು ಹಾಗೂ ಕಡಿಮೆ ಫಲವತ್ತತೆಯ ಭೂಮಿಗಳಲ್ಲಿ ಬೆಳೆಯುತ್ತಿರುವುದು.
- ದೃಢೀಕರಿಸಿದ ಮತ್ತು ಶಿಫಾರಸ್ಸು ಮಾಡಿದ ಸುಧಾರಿತ ತಳಿಗಳ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಬಳಸದಿರುವುದು ಮತ್ತು ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸದಿರುವುದು.
- ಸೂಕ್ತ ಬೆಳೆ ಪರಿವರ್ತನೆ ಕೈಗೊಳ್ಳದಿರುವುದು.
- ಬೆಳೆ ವಿವಿಧ ಹಂತಗಳಲ್ಲಿ ತೇವಾಂಶದ ಕೊರತೆ, ಪೋಷಕಾಂಶದ ಕೊರತೆ, ಕೀಟ ಮತ್ತು ರೋಗಗಳ ಬಾಧೆ ಹಾಗೂ ಹವಾಮಾನದ ವೈಪರೀತ್ಯಗಳ ಒತ್ತಡಗಳಿಗೆ ಒಳಗಾಗುವುದು ; ಮತ್ತು
- ಸಕಾಲದಲ್ಲಿ ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳದಿರುವುದು.